(6ನೇ ಪುಟದಿಂದ)

ದೀಪಾವಳಿಯ ಒಳಗುಟ್ಟು. ದೀಪಾವಳಿಯಲ್ಲಿ ಇಡೀ ಭಾರತಮಾತೆಯೇ ದೀಪಗಳ ಸಾಲಿನಿಂದ ಅಲಂಕೃತವಾಗಿ, ಮೈತುಂಬಾ ದೀಪಗಳ ಒಡವೆ ತೊಟ್ಟು ಪಕ್ಕಾ ಮದುಮಗಳಾಗಿ ಕಂಗೊಳಿಸುತ್ತಾಳೆ.

ಬಾಲ್ಯದಲ್ಲಿ ನಮಗೆ ದೀಪಾವಳಿ ಹಬ್ಬವೆಂದರೆ ಚೆಂಡು ಹೂವಿನ ಹಬ್ಬ. ಜಾನುವಾರುಗಳ, ಅದರಲ್ಲೂ ಎತ್ತುಗಳ ಶೃಂಗರಿಸುವ ಹಬ್ಬ, ಪಟಾಕಿ ಹೊಡೆಯುವ ಹಬ್ಬ. ಹಿಗ್ಗಿಗೆ ಇನ್ನೇನು ಕಾರಣಗಳು ಬೇಕು? ನಮ್ಮಲ್ಲಿ ದೀಪಾವಳಿಗೆ ಚೆಂಡು ಹೂಗಳು ಅತ್ಯವಶ್ಯಕ. ಜಾನುವಾರುಗಳ ಅಲಂಕಾರಕ್ಕಾಗಿಯೇ ಪ್ರತೀ ಮನೆಯವರೂ ತಮ್ಮ ಹೊಲಗಳಲ್ಲಿ ಒಂದಿಷ್ಟು ಚೆಂಡು ಹೂವಿನ ಗಿಡಗಳನ್ನು ಬೆಳೆಸುವುದು ವಾಡಿಕೆ. 'ನರಕ ಚತುರ್ದಶಿ'ಯಂದು ನಮ್ಮ ಕಡೆ ಆಚರಿಸುವ 'ಬೂರೇ ಹಬ್ಬ' ಒಂದು ವಿಶೇಷ ಹಬ್ಬ. ಬೆಳ್ಳಂಬೆಳಗ್ಗೆ ಬಾವಿಯಿಂದ ನೀರು ತಂದು, ಕುಂಭದಲ್ಲಿ ತುಂಬಿಸಿಟ್ಟು ಪೂಜೆ ಮಾಡುವುದು. ಇದರಲ್ಲೇನು ವಿಶೇಷ ಎನ್ನುವಿರಾ? ವಿಶೇಷ ಇರುವುದು ಆ ದಿನ ರಾತ್ರಿ ಬೇರೆಯವರ ಮನೆಯ ವಸ್ತುಗಳನ್ನು – ಅಂದರೆ ಹೊಲದಲ್ಲಿರುವ ಸೌತೆಕಾಯಿ, ಗೆಣಸು, ಚೆಂಡು ಹೂಗಳನ್ನು ಕಳ್ಳತನ ಮಾಡುವುದರಲ್ಲಿ. ಮನೆಯವರು ಅದೆಷ್ಟೇ ಹುಷಾರಾಗಿದ್ದರೂ ಅವರ ಕಣ್ತಪ್ಪಿಸಿ, ಕದ್ದು ತಂದ ಹೂವುಗಳನ್ನೂ ನಮ್ಮ ಹೊಲದಲ್ಲಿ ಯಾರೂ ಕದಿಯದೇ ಬಿಟ್ಟ ಹೂವುಗಳನ್ನೂ ಸೇರಿಸಿ, ಸುರಿದು, ಮಾಲೆ ಮಾಡುವುದರಲ್ಲಿ ಅದೇನೋ ಮಜ.



ಚಿಣ್ಣರಿಗೆಲ್ಲ ಹಬ್ಬದ ಪ್ರಮುಖ ಸಂಭ್ರಮ ಇರುವುದು ಪಟಾಕಿ ಹಚ್ಚುವುದರಲ್ಲಿ. ಸುರು ಸುರು ಬತ್ತಿ, ನಕ್ಷತ್ರ ಬುಟ್ಟಿ, ಹೂಕುಂಡ, ಭೂಚಕ್ರ – ಪಟಾಕಿ ಸಂಭ್ರಮ. ಈ ಸಿಡಿಮದ್ದುಗಳಿಂದಾಗುವ ಅನಾಹುತಗಳ ಅರಿವು ಅಷ್ಟೊಂದಿಲ್ಲದೆ, ಪಟಾಕಿ ಹಚ್ಚಿ ಕುಣಿದು ಕುಪ್ಪಳಿಸಿದ್ದೇ ಕುಪ್ಪಳಿಸಿದ್ದು. ದೀಪಾವಳಿ ಎಂದರೆ ಪಟಾಕಿ ಎನ್ನುವಷ್ಟರ ಮಟ್ಟಿಗೆ ಪಟಾಕಿಯ ಗುಂಗು ಹಿಡಿಸಿಕೊಂಡು, ಒಂದು ತಿಂಗಳ ಹಿಂದಿನಿಂದಲೇ ಅಪ್ಪನಿಗೋ, ಅಣ್ಣಂದಿರಿಗೋ, ಚಿಕ್ಕಪ್ಪಂದಿರಿಗೋ ದುಂಬಾಲು ಬಿದ್ದು ಪಡೆಯುತ್ತಿದ್ದ ಗಳಿಗೆ ಮರೆಯಲು ಸಾಧ್ಯವೇ?

ತಾರುಣ್ಯದಲ್ಲೂ ಸಿಡಿಮದ್ದಿನ ಸೆಳೆತ ಕೊಂಚ ಮಟ್ಟಿಗೆ ಇದ್ದೇಇರುತ್ತದೆ. ವಯಸ್ಸು ಮಾಗಿದಂತೆಲ್ಲ ಪಟಾಕಿ ಸುಡುವುದು ವ್ಯರ್ಥ ಎನ್ನುವ ತಿಳಿವು ನಮ್ಮದಾಗತೊಡಗುತ್ತದೆ. ಸಮಾಜಕ್ಕೆ, ಪರಿಸರಕ್ಕೆ ಅಷ್ಟೇ ಏಕೆ ವೈಯಕ್ತಿಕವಾಗಿಯೂ ಪಟಾಕಿ ಅನರ್ಥಕಾರಿ.

ನರಕಾಸುರನನ್ನು ಸಂಹಾರ ಮಾಡಿ, ಜಗತ್ತಿಗೆ ಶಾಂತಿ ಮತ್ತು ನೆಮ್ಮದಿ ಹುಟ್ಟಿಸಿದ ಕಾರಣ 'ನರಕ ಚತುರ್ದಶಿ'ಯನ್ನು ಆಚರಿಸಿದರೆ, ತ್ಯಾಗ–ವಚನನಿಷ್ಠೆಯ ಪ್ರತೀಕವಾದ ಬಲಿ ಚಕ್ರವರ್ತಿಯ ನೆನಪಿಗಾಗಿ 'ಬಲಿ ಪಾಡ್ಯಮಿ'ಯನ್ನು ಆಚರಿಸಲಾಗುತ್ತದೆ. ಹೀಗೆ ಒಂದು ನಿರ್ದಿಷ್ಟ ಉದ್ದೇಶ ಹೊಂದಿ, ಸಂಭ್ರಮದ, ವಿಜಯದ ಸಂಕೇತವಾಗಿ ಆಚರಿಸಬೇಕಾದ ಹಬ್ಬದಲ್ಲಿ ಪಟಾಕಿ, ಗರ್ನಾಲ್‌ನಂತಹ ಪರಿಸರ ಕಂಟಕ ಸಿಡಿಮದ್ದುಗಳನ್ನು ಸಿಡಿಸಿ, ವಾಯುಮಾಲಿನ್ಯ, ಶಬ್ದಮಾಲಿನ್ಯದ ಜೊತೆಗೆ ಹಣವನ್ನೂ ವ್ಯಯಮಾಡುತ್ತೇವೆ. ಪಟಾಕಿ ಸಿಡಿಸುವಾಗ ಎಚ್ಚರ ತಪ್ಪಿ, ಅನಾಹುತಗಳಾದ ಉದಾಹರಣೆಗಳೂ ನಮ್ಮ ಕಣ್ಮುಂದಿವೆ. ಶಾಶ್ವತವಾಗಿ ಕಣ್ಣು ಕಳೆದುಕೊಂಡವರಿಗೂ ಲೆಕ್ಕವಿಲ್ಲ.

ಸಮೀಕ್ಷೆಗಳ ಪ್ರಕಾರ ಪಟಾಕಿಗಳ ಶಬ್ದ ನಮ್ಮ ಸುತ್ತಲಿರುವ ಪ್ರಾಣಿ–ಪಕ್ಷಿಗಳ ಜೀವಕ್ಕೂ ಮಾರಕ. ಹಬ್ಬದ ಸಂದರ್ಭದಲ್ಲಿ ಒಂದು ವೇಳೆ ಅವಘಡವಾದರೆ ಸಂತೋಷದ ಪ್ರತೀಕವಾದ ಹಬ್ಬದಲ್ಲಿ ನಾವೇ ಕೈಯಾರೆ ದುಃಖವನ್ನು ತಂದುಕೊಂಡು, 'ಹಾದೀಲಿ ಹೋಗೋ ಮಾರೀನ ಮನೇಗೆ ಕರ್ಕೊಂಡು ಬಂದಿದ್ನಂತೆ' ಎನ್ನುವ ಗಾದೆಯಂತಾಗುತ್ತದೆ.

ಸಂತೋಷವನ್ನು ದುಃಖವಾಗಿಸುವ ಬದಲು, ಪರಿಸರ ಕಂಟಕರಾಗುವ ಬದಲು, ಮನೆ ಮನೆಯಲ್ಲೂ ದೀಪ ಹಚ್ಚಿ ಮನೆಯನ್ನು ಬೆಳಗಿ, ಉಲ್ಲಾಸವನ್ನು ವೃದ್ಧಿಸೋಣ. 'ದೀಪದ ಹಬ್ಬ' ಎಂಬ ಹೆಸರಿಗೆ ಗೌರವ ತರೋಣ. 'ಪ್ರೀತಿಯ ಕರೆ ಕೇಳಿ ಆತ್ಮನ ಮೊರೆ ಕೇಳಿ/ನೀ ಬಂದು ನಿಂದಿಲ್ಲಿ ದೀಪ ಹಚ್ಚ' ಎನ್ನುವ ಕವಿವಾಣಿಯನ್ನು ಎತ್ತಿ ಹಿಡಿಯೋಣ.